## ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ ಮೊಳಕಾಲ್ಮೂರು

ದಾವಾ ಸಂಖ್ಯೆ: ಓ.ಎಸ್. ಸಂಖ್ಯೆ: 33/2017

ಪಿ.ಡಬ್ಲ್ಯೂ.1

ದಿನಾಂಕ: 14.01.2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು: ಶ್ರೀ. ವಿ.ಜಿ.ಪಿ. ವಕೀಲರಿಂದ

ಈ ದಾವೆಯನ್ನು ಹೂಡಲು ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ನಾನೇ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಅಂಶಗಳು ನನಗೆ ತಿಳಿದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಎಲ್ಲ ತಿಳಿದಿದೆ ಎಂದು ನುಡಿದಿರುತ್ತಾರೆ. ಈ ದಾವೆಯನ್ನು ಎಷ್ಟು ಜಮೀನಿನ ಮೇಲೆ ಹಾಕಿರುತ್ತೀರಾ ಎಂದರೆ ಸಾಕ್ಷಿಯು ನಾನು ನನ್ನ 4 ಎಕರೆ ಜಮೀನಿನ ಮೇಲೆ ಹಾಕಿರುತ್ತೇನೆ ಎಂದು ನುಡಿದಿರುತ್ತಾರೆ. ನನ್ನ 4 ಎಕರೆ ಜಮೀನಿನ ಸ.ನಂ. 330 ಇರುತ್ತದೆ. ಅದರ ಸಬ್ ನಂಬರ್ ನನಗೆ ಗೊತ್ತಿಲ್ಲ. ದಿ: 24.02.1994 ಸ.ನಂ. 330/ಪಿ1 ಜಮೀನು ಒಟ್ಟು ಆಸ್ತಿ 13 ಎಕರೆ 39 ಗುಂಟೆ ಪಾಲು ವಿಭಾಗ ಮುಖಾಂತರ ಪ್ರತಿವಾದಿ 1 ಮತ್ತು 2 ರವರಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆದರೆ 4 ಎಕರೆ ನನಗೆ ಸೇರಿದ್ದು ಎಂದು ನುಡಿದಿರುತ್ತಾರೆ. ಸ. ನಂ. 330/ಪಿ1 ರಲ್ಲಿನ 13 ಎಕರೆ 39 ಗುಂಟೆ ಜಮೀನಿಗೆ ಹೋಗಲು ದಾರಿ ಯಾವ ಕಡೆ ಇತ್ತು ಎಂದರೆ ಸಾಕ್ಷಿಯು ದೊಡ್ಡ ಸಿದ್ದಪ್ಪನವರು ಬಸಮ್ಮನವರ ಹೊಲದಿಂದ ಗಾಳೆಪ್ಪನ ಹೊಲಕ್ಕೆ ಬಂದು ನಂತರ ನಮ್ಮ ಹೊಲಕ್ಕೆ ಬರಲಾಗುತ್ತಿತ್ತು ಎಂದು ನುಡಿದಿರುತ್ತಾರೆ. ದಾವಾ ಆಸ್ತಿ 1 ಅಂದರೆ, 13 ಎಕರೆ 39 ಗುಂಟೆ ಜಮೀನಿಗೆ ಯಾವ ರೀತಿ ಬರುತ್ತಿದ್ದರು ಎಂದರೆ ಗಾಳೆಪ್ಪ, ದೊಡ್ಡಸಿದಪ್ಪ, ಬಸಮ್ಮ ಮತ್ತು ಗಾಳೆಪ್ಪನ ಜಮೀನಿನ ಪಶ್ಚಿಮ ದಿಕ್ಕಿಗೆ ಕಾಡು ಸಿದ್ದಾಪುರ ಗ್ರಾಮ ಬರುತ್ತದೆ ಎಂದರೆ ಸರಿ. ಕಾಡು ಸಿದ್ದಾಪುರ ಗ್ರಾಮದಿಂದ ಬಸಮ್ಮ ಮತ್ತು ಕುಮಾರಪ್ಪನವರ ಜಮೀನಿನ ಪಕ್ಕದಲ್ಲಿ ಬಂದು ದಾವಾ ಷೆಡ್ಯೂಲ್ 1, 13 ಎಕರೆ 39 ಗುಂಟೆಗೆ ಬರಲಾಗುತ್ತಿತ್ತು ಎಂದರೆ ಸಾಕ್ಷಿಯು 2 ದಾರಿ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಐಟಂ. ನಂ. 1 ದಾವಾ ಆಸ್ತಿಗೆ ಒಂದೇ ದಾರಿ ಇದೆ ಎಂದರೆ ಸರಿಯಲ್ಲ. ದಿ: 25.02.2002 ರಂದು

13 ಎಕರೆ 39 ಗುಂಟೆಯ ಪೈಕಿ 4 ಎಕರೆ ಜಮೀನನ್ನು ಪ್ರತಿವಾದಿ 1 ಮತ್ತು 2 ರವರಿಂದ ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಪಾಲು ವಿಭಾಗ ಪತ್ರದಲ್ಲಿ ಬಂಡಿದಾರಿ ವಿಚಾರವಾಗಿ 1 ನೇ ದಾವಾ ಆಸ್ತಿಯ ಬಗ್ಗೆ ನಮೂದನ್ನು ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಮಾಡಿಸಿಕೊಂಡಂತಹ ಕ್ರಯ ಪತ್ರಕ್ಕೆ 1 ನೇ ಪ್ರತಿವಾದಿ ಗಾಳೆಪ್ಪನ ಮಕ್ಕಳು ಯಾರು ಸಹಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಗಾಳೆಪ್ಪನು ಮದ್ಯಪಾನ ವ್ಯಸನಿ ಎಂದರೆ ಸರಿಯಲ್ಲ. ಆತನು ಮದ್ಯಪಾನ ವ್ಯಸನಿಯಾಗಿದ್ದರಿಂದ ಆತನನ್ನು ಮೋಸಮಾಡಿ ಆತನಿಂದ ದಾವಾ ಷೆಡ್ಯೂಲ್ ಬಿ ರ ಆಸ್ತಿಯನ್ನು ನಮ್ಮ ಹೆಸರಿಗೆ ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ 1 ಗಾಳೆಪ್ಪನವರು ಮಾರಾಟ ಮಾಡಿದ ಬಿ ಷೆಡ್ಯೂಲ್ ಆಸ್ತಿಯ ಮಾರಾಟ ಹಣವನ್ನು ಕುಟುಂಬದ ಅವಶ್ಯಕತೆಗೆ ಬಳಸಿಕೊಂಡಿರುವುದಿಲ್ಲ ಆದರೆ ತನ್ನ ಸ್ವಂತ ಚಟಗಳಿಗೆ ಬಳಸಿರುತ್ತಾನೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿನ ಕೊನೆಯ ಪುಟದಲ್ಲಿ ಪೂರ್ವದಿಂದ ಪಶ್ಚಿಮವಾದಿ ಉತ್ತರ ಅಂಚಿನಾದ ಓಡಾಡಲು ಬಂಡಿದಾರಿ ಹಕ್ಕು ಇರುತ್ತದೆ ಎಂದು ಹಸ್ತಾಕ್ಷರದಲ್ಲಿ 1 ಮತ್ತು 2 ನೇ ಪ್ರತಿವಾದಿರವರ ಒಪ್ಪಿಗೆ ಇಲ್ಲದೇ ಬರೆಸಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಹಸ್ತಾಕ್ಷರದಲ್ಲಿ ಬಂಡಿದಾರಿ ಎಂದು ಬರೆದಿರುವುದನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ 4 ಎಕರೆ ಜಮೀನನಲ್ಲಿ ಬಂಡಿದಾರಿ ಬರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಗಾಳೆಪ್ಪನ ಜಮೀನಿನಿಂದ ನಮ್ಮ ಜಮೀನಿಗೆ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಅದೇ ರೀತಿ ನನ್ನ ದಾವೆಯಲ್ಲಿಯೂ ಸಹ 4 ಎಕರೆ ಜಮೀನು ಎಂದು ಬರೆದಿದ್ದು ಅದರಲ್ಲಿಯೇ ಬಂಡಿದಾರಿಯೂ ಸಹ ಬರುತ್ತದೆ ಎಂದು ಬರೆಸಿರುತ್ತೆನೆ ಎಂದರೆ ಸರಿ. ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿದ್ದು ಅದರಲ್ಲಿ ಒಟ್ಟು ಕುಟುಂಬದ ಎಲ್ಲಾ ಸದಸ್ಯರಿಗೂ ಹಕ್ಕು ಇರುವುದರಿಂದ ಪ್ರತಿವಾದಿ 1 ಮತ್ತು 2 ರವರಿಗೆ ಮಾತ್ರ ಬಿ. ಷೆಡ್ಯೂಲ್ ಆಸ್ತಿಯನ್ನು ಮಾರಾಟ ಮಾಡಲು ಹಕ್ಕಿಲ್ಲ ಎಂದರೆ ಸರಿಯಲ್ಲ. ಬಿ ಷೆಡ್ಯೂಲ್ ಆಸ್ತಿಯಲ್ಲಿರುವ ಬಂಡಿದಾರಿಯಲ್ಲಿ ನಾನು ಸ್ವಾದೀನದಲ್ಲಿ ಓಡಾಡುವುದಿಲ್ಲ ಎಂದರೆ ಸರಿಯಲ್ಲ. ಬಿ ಷೆಡ್ಯೂಲ್ ಆಸ್ತಿಯಲ್ಲಿ ಬಂಡಿದಾರಿಯು ಇದ್ದು ಅದರ

ಸ್ವಾದೀನದಲ್ಲಿ ನಾವು ಇಲ್ಲದೇ ಇರುವುದರಿಂದ ಈ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಗಾಳಪ್ಪನವರ ಜಮೀನನ್ನು ಬೇರೆಯವರಿಗೆ ಮಾರಾಟ ಮಾಡುವವರೆಗೂ ನಾವು ಓಡಾಡಿಕೊಂಡಿದ್ದು 3 ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರ 3 ನೇ ಪ್ರತಿವಾದಿಯು ನಮಗೆ ಓಡಾಡಲು ಬಿಟ್ಟಿರುವುದಿಲ್ಲ ಆದ್ದರಿಂದ ನಾನು ಈ ದಾವೆಯನ್ನು ಹೂಡಿರುತ್ತೆನೆ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿ ಗಾಳೆಪ್ಪನ ಜಮೀನಿನಿಂದ ನನ್ನ ಷೆಡ್ಯೂಲ್ ಬಿ ಆಸ್ತಿಗೆ ದಾರಿ ಇದೆ ಎಂದು ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ನಿಡಿರುವುದಿಲ್ಲ ಎಂದರೆ ಸರಿಯಲ್ಲ. 13 ಎಕರೆ 39 ಗುಂಟೆಯಲ್ಲಿ ನನಗೆ 4 ಎಕರೆಯನ್ನು ಮಾರಾಟ ಮಾಡಿದ್ದು ಉಳಿದಂತ 9 ಎಕರೆ 39 ಗುಂಟೆಯಲ್ಲಿ 3 ಎಕರೆಯನ್ನು 3 ನೇ ಪ್ರತಿವಾದಿಯವರಿಗೆ ದಿ: 04.04.2017 ರಲ್ಲಿ ರೂ. 2,28,000/- ಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಈ ರೀತಿ ಮಾರಾಟ ಮಾಡಿದ ನಂತರ 3 ನೇ ಪ್ರತಿವಾದಿಯ ಹೆಸರಿಗೆ ಪಹಣಿ ಬಂದಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯು 3 ನೇ ಪ್ರತಿವಾದಿಯ ಹಕ್ಕು ಸ್ವಾದಿನದಲ್ಲಿಯೇ ಇರುತ್ತದೆ ಎಂದರೆ ಸರಿ.

ಬಸಮ್ಮ ಮತ್ತು ಕುಮಾರಪ್ಪನವರ ಜಮೀನಿನ ಪಕ್ಕದಲ್ಲಿರುವ ದಾರಿಯಲ್ಲಿ ನಾವು ಬಸಮ್ಮ, ಕುಮಾರಪ್ಪ ಮತ್ತು ಊರಿನ ಇತರರು ಎಲ್ಲಾರೂ ಸೇರಿ ಓಡಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಗಾಳೆಪ್ಪನ ಹೊಲದಲ್ಲಿ ಮಾತ್ರ ಓಡಾಡುತ್ತೇವೆ ಎಂದು ನುಡಿದಿರುತ್ತಾರೆ. ಬಸಮ್ಮ ಮತ್ತು ಕುಮಾರಪ್ಪನ ಹೊಲದ ಪಕ್ಕದಲ್ಲಿಯೇ ದಾರಿ ಇದ್ದು ನಾನು ಹೇಳುವ ರೀತಿ ಗಾಳೆಪ್ಪನ ಜಮೀನಿನಲ್ಲಿ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ನನ್ನ ಗಂಡ ಗಾಳಿ ಸಿದ್ದಯ್ಯನವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಿ ಷೆಡ್ಯೂಲ್ ಆಸ್ತಿಯಲ್ಲಿ ತೋರಿಸಿರುವ ಚೆಕ್ಕುಬಂದಿಯಲ್ಲಿ ದಾರಿ ಇರುವ ಬಗ್ಗೆ ಯಾವ ಕಡೆಯೂ ತೋರಿಸಿಲ್ಲ ಎಂದರೆ ಸರಿ. 2 ನೇ ದಾವಾ ಆಸ್ತಿಯಲ್ಲಿ ಬಂಡಿದಾರಿ ಇದೆ ಎಂದು ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ 1 ರಿಂದ 3 ನೇ ಪ್ರತಿವಾದಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಈ

ಸುಳ್ಳು ದಾವೆಯನ್ನು ಹೂಡಿರುತ್ತೆನೆ ಎಂದರೆ ಸರಿಯಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**)

**ಓ.ಹೇ.ಕೇ.ಸರಿ ಇದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಮೊಳಕಾಲ್ಮೂರು.